ಮಗನ ನಡವಳಿಕೆಯಿಂದ ಬೇಸತ್ತು ಶಿಕ್ಷಕಿಯಾದರೂ ತಾನು ಒಳ್ಳೆಯ ತಾಯಿಯಾಗಲಿಲ್ಲವೇ? ಎಂಬ ಕೊರಗು ಅವಳನ್ನು ತುಂಬಾ ಜರ್ಜಿತಮಾಡಿತ್ತು. ಬಿಇ ಮುಗಿಸಿ ಕಂಪನಿಯಲ್ಲಿ ಗಂಡ ಕೆಲಸ ಮಾಡುತ್ತಿದ್ದರೂ ಕೆಲಸದ ಭದ್ರತೆ ಇಲ್ಲ. ಒಂದೇ ಸಂಬಳದೊಂದಿಗೆ ದುಬಾರಿ ಜಗತ್ತಿನಲ್ಲಿ ಜೀವನ ನಿಭಾಯಿಸಲು ರಾಜಿಯಾಗುವಂತಿಲ್ಲ. ಇಬ್ಬರ ಬೆವರ ಹನಿಗಳನ್ನೂ ಸಂಸಾರ ಬಯಸುತ್ತಿತ್ತು. ಆದರೆ ಗಂಡ ಸಂಸಾರಕ್ಕೆ ಸಮಯ ಕೊಡಲು ಸಾಧ್ಯವಾಗದಿರುವುದು ಅವಳನ್ನು ತುಂಬಾ ಕುಗ್ಗಿಸಿತ್ತು. ಮಾತು ಕೇಳದ ಮಗನ ಭವಿಷ್ಯದ ಚಿಂತೆಯಲ್ಲಿ ಬೇಯುತ್ತ, ಮಗಳಿಗೂ ಸಂಪೂರ್ಣ ನ್ಯಾಯ ಒದಗಿಸಲಾಗದೇ ತ್ರಿಶಂಕು ಸ್ಥಿತಿಯಲ್ಲಿ ಓಲಾಡುತ್ತಿದ್ದವಳಿಗೆ ಟೆಡ್ಡಿಯಿಂದಾದರೂ ಮಗಳು ಖುಷಿಯಿಂದ ಇರುವುದು ನಿರಾಳವೆನಿಸುತ್ತಿತ್ತು.

‘ಮಧು, ಸೋಮವಾರ ಅಮವಾಸ್ಯೆ ಐತೆವಾ. ಶ್ರವಣಾ ಚಾಲೂ ಆತು. ಬ್ಯಾಳಿಗೆ ಹಾಕಬೇಕು. ಮಂಗಳಗೌರಿ ಪೂಜಾಕ್ಕ ತಯಾರ ಮಾಡಕೋ. ಸಂದೀಪಗಂತೂ ಟೈಮ ಇರಂಗಿಲ್ಲ. ಅವನ ಆಫೀಸ ಕೆಲಸಾನ ರಗಡ ಇರ್ತೈತಿ. ನೀನ ಸಾಲಿಯಿಂದ ಬಂದು ಏನೇನ ಸಾಮಾನು ಬೇಕು ಈಗಿಂದನ ತಯಾರ ಮಾಡಕೋ. ನಾಗರ ಪಂಚಮಿಗೆ ಉಂಡಿಗೆ ಸಾಮಾನ ತರಬೇಕು. ಈ ಸಲಾ ‘ನಿಮ್ಮಿ’ಗೆ ಬೇಸನ್ ಉಂಡಿ, ಶೇಂಗಾ ಉಂಡಿ ಜಾಸ್ತೀನs ಕಟ್ಟಬೇಕಂತ. ಉದಯ ತಾ ಹಬ್ಬಕ್ಕ ಬರಲಿಕ್ರ ಬೆಂಗಳೂರಿಗೆ ಉಂಡಿ ಪಾರ್ಸಲ್ ಕಳಸಂದಾನ. ಮೂರನೇ ವಾರದಾಗ ‘ಅಯ್ಯಗಳಿಗೆ’ ಮಾಡಬೇಕು. ಐದು ಮಂದಿ ಸ್ವಾಮಿಗಳನ್ನ ಮನಿಗೆ ಬಿನ್ನಕ್ಕ ಕರಿಬೇಕು. ಪ್ರತಿ ಮಂಗಳವಾರ ಹೋಳಿಗಿ ಮಾಡಿ, ಪೂಜಾ ಮಾಡಿ ಎಡಿ ಮಾಡೇ ಸಾಲಿಗೆ ಹೋಗು’ ಎಂಬ ಶಶಿಯಮ್ಮನ ಶ್ರಾವಣದ ಕ್ರಿಯಾಯೋಜನೆಯನ್ನು ಕೇಳಿದ ಮಧುಗೆ ಒಂದು ಕ್ಷಣ ತಲೆ ಧಿಂ ಎಂದಿತು.

ಶ್ರಾವಣದ ಕೆಲಸದ ಒತ್ತಡದಲ್ಲಿ, ಆರ್ಡರ್ ಮಾಡಿದ್ದ ಟೆಡ್ಡಿ ಮಧುವಿನ ಸ್ಮೃತಿಪಟಲದಿಂದ ಮಾನ್ಯತೆ ಕಳೆದುಕೊಂಡಿತ್ತು. ಮಗಳು ಆಗಾಗ ನೆನಪಿಸಿದರೂ, ಅದರ ಬಗ್ಗೆ ಉದಾಸೀನತೆ ಹೆಚ್ಚಾಗಿತ್ತು. ಆದರೆ ಈ ಬಾರಿ ಕಂಪನಿಯಿಂದ ‘ಯುವರ್ ಆರ್ಡರ್ ಡೆಲಿವರ್ಡ್’ ಎಂಬ ಸಂದೇಶ ಬಂತು. ಬಹುಶಃ ಇನ್ನೇನು ಬರಬಹುದು ಎಂದುಕೊಂಡರೂ, ಸಂದೇಶ ಬಂದು ಮೂರು ನಾಲ್ಕು ದಿನವಾದರೂ ಟೆಡ್ಡಿ ಮನೆ ಸೇರಲಿಲ್ಲ. ಈಗಾಗಲೇ ಹಣ ಕೂಡ ಹಾಕಿರುವುದರಿಂದ ಮಧು ಸ್ವಲ್ಪ ಆತಂಕಗೊಂಡಳು. ಶ್ರಾವಣದಲ್ಲಿ ಹಣ ಕಳೆದುಕೊಳ್ಳುವುದು ಅವಳಿಗೆ ಇಷ್ಟವಿರಲಿಲ್ಲ. ಕಸ್ಟಮರ್ ಕೇರ್ ನಂಬರ್ ಗೂಗಲ್‌ನಲ್ಲಿ ಹುಡುಕಲು ಪ್ರಾರಂಭಿಸಿದಳು. ಒಂದೆರಡು ನಂಬರ್ ಸರಿಯಾಗಿ ಕನೆಕ್ಟ ಆಗಲಿಲ್ಲವಾದರೂ ಕೊನೆಗೆ ಒಂದು ನಂಬರ್ ಕನೆಕ್ಟ ಆಗಿ ಹಿಂದಿಯಲ್ಲಿ ಸಮಸ್ಯೆ ಕೇಳಲು ಪ್ರಾರಂಭಿಸಿದರು. ಸಮಸ್ಯೆಗೆ ಸ್ಪಂದಿಸುತ್ತ ಹೋದಂತೆ, ಟೆಡ್ಡಿ ಸದ್ಯಕ್ಕೆ ಸ್ಟಾಕ್‌ನಲ್ಲಿ ಇಲ್ಲ. ತಮ್ಮ ಅಕೌಂಟ್‌ಗೆ ಹಣ ಹಿಂದಿರುಗಿಸುವುದಾಗಿ ಹೇಳಿ ವಾಟ್ಸಾಪ್‌ಗೆ ಫೈಲ್ ಕಳುಹಿಸಿ ಇನ್‌ಸ್ಟಾಲ್ ಮಾಡಲು ಹೇಳಿ, ಫೋನ್ ಪೇನಲ್ಲಿ ಅಕೌಂಟ್ ಚೆಕ್ ಮಾಡಲು ಹೇಳಿದರು.

‘ರಿಫಂಡ್ ಹುವಾ ಮೇಡಮ್? ಆಪಕೆ ಫೋನ್ ಪೆ ಪರ್ ಬ್ಯಾಲನ್ಸ ಚೆಕ್ ಕೀಜಿಯೆ’ ಎಂದು ಪುನಃ ಪುನಃ ಹೇಳತೊಡಗಿದರು. ಫೋನ್ ಪೇ ನಲ್ಲಿ ತನ್ನ ಬ್ಯಾಂಕ್ ಬ್ಯಾಲನ್ಸ ನೋಡುತ್ತಿದ್ದ ಮಧುಗೆ ತನ್ನ ಈ ತಿಂಗಳ ಸಂಬಳವನ್ನು ಒಂದು ಪೈಸೆ ಕೂಡ ಇನ್ನೂ ಬಳಸಿಲ್ಲ ಎಂಬುದು ನೆನಪಾಯಿತು. ಯಾವತ್ತೂ ಇಷ್ಟು ದಿನಗಳವರೆಗೆ ಇಷ್ಟು ದೊಡ್ಡ ಮೊತ್ತದ ಹಣವನ್ನು ಸೇವಿಂಗ್ಸ ಖಾತೆಯಲ್ಲಿ ಎಂದೂ ಬಿಟ್ಟಿರಲಿಲ್ಲ. ‘ಅಯ್ಯೋ! ನಿನ್ನೆ ಎಫ್‌ಡಿ ಮಾಡಬೇಕೆಂದಿದ್ದೆ. ಛೆ! ಮಾಡಲಿಲ್ಲ. ಎಫ್‌ಡಿ ಮಾಡಿ ನಾನು ಕಾಲ್ ಮಾಡಬೇಕಿತ್ತು ಎಂದುಕೊಳ್ಳುತ್ತಿದ್ದಂತೆ–

‘ಮೇಡಮ್ ಚೆಕ್ ಕರೋ! ರೆಫಂಡ್ ಹುವಾ?’ ಎಂಬ ಧ್ವನಿ ಮತ್ತೆ ಬಂತು.

‘ತನ್ನ ಅಕೌಂಟಿನಲ್ಲಿದ್ದ ಎಂಬತ್ತು ಸಾವಿರ ರೂಪಾಯಿಯನ್ನು ಹಾಗೇ ನೋಡುತ್ತಿದ್ದ ಮಧು, ಎಷ್ಟೋ ಪ್ರಯತ್ನದ ನಂತರ ಈ ನಂಬರ್‌ಗೆ ಕಾಲ್ ಸಿಕ್ಕಿದೆ. ಇದೊಂದ ಸಾರಿ ಇರಲಿ. ಈ ಕಾಲ್ ಮುಗಿದ ತಕ್ಷಣ ಎಫ್‌ಡಿ ಮಾಡೇಬಿಡಬೇಕು ಎಂದುಕೊಳ್ಳುತ್ತ, ‘ನಹೀ! ಸರ್. ಅಭಿ ನಹೀ ಹುವಾ ಹೈ’ ಎಂದಳು.

‘ಇಂಟರ್ನೆಟ್ ಸ್ಲೋ ಹೈ ಮೇಡಂ! ಅಭಿ ಹೋಗಾ ಥೋಡಾ ವೇಟ್ ಕೀಜಿಯೆ. ನಹೀ ತೋ ಆಪಕೆ ಘರ್ ಕೆ ಕಿಸೀ ಓರ್ ಕಾ ಫೋನ್ ಪೆ ನಂಬರ್ ದೀಜಿಯೆ. ವಹಾ ಮೈ ಜಮಾ ಕರದೂಂಗಾ. ಆಪ ಉಸಸೆ ಲೇಲೋ’ ಎಂದಾಗ ಗಂಡನ ಫೋನ್ ಪೇ ನಂಬರ್ ಕೊಡಬೇಕೆಂದವಳು ‘ಏನಾದರೂ ಹೆಚ್ಚು ಕಡಿಮೆಯಾದರೆ? ಬೇಡಾ’ ಎಂದುಕೊಂಡು ಕೊಡಲು ಒಪ್ಪಲಿಲ್ಲ. ‘ರುಕಿಯೆ ಮೇಡಂ. ಅಭಿ ಹೋಜಾಯೆಗಾ. ಹಮಾರೆ ಅಕೌಂಟ್ ಸೆ ಅಮೌಂಟ್ ಕಟ್ ಹುವಾ ಹೈ. ಆಪಕೋ ಆಜಾಯೆಗಾ’ ಎನ್ನುತ್ತಿದ್ದಂತೆ **‘amount is refunding...’** ಎಂಬ ರನ್ನಿಂಗ ಮೆಸೇಜ್ ಬರಲು ಪ್ರಾರಂಭಿಸಿತು. ಅದನ್ನು ನೋಡಿ ಮಧುಗೆ ಇದೇನೂ ಫ್ರಾಡ್ ಅಲ್ಲಾ ಎಂದು ಸಮಾಧಾನವಾಯಿತು.

‘ಹಾ! ಮೇಡಂ ಅಭಿ ಆಪಕಾ ಅಮೌಂಟ್ ರೆಫಂಡ್ ಹೋಜಾಯೆಗಾ. ತಬ್ ತಕ್ ಆಪ ಮೊಬೈಲ್ ಕೆ ಕಿಸೀ ಬಟನ್ ಕೋ ಟಚ್ ಮತ್ ಕರೋ. ಆಪ ತೋ ಹೊಶಿಯಾರ ಹೈ. ಇಸಲಿಯೆ ಆಪಕಾ ರೆಫಂಡ್ ಬಹುತ್ ಜಲ್ದಿ ಹುವಾ. ನಹೀ ತೋ ಬಹುತ್ ಲೋಗ್ ಹಮಾರೆ ಬಹುತ್ ಸಿರ್ ಖಾತೆ ಹೈ ಮೇಡಂ’ ಎಂದಾಗ ಮಧುನ ಮುಖದಲ್ಲಿ ಆತ್ಮವಿಶ್ವಾಸದ ಮುಗುಳ್ನಗೆ ಮೂಡಿತು. ತನ್ನ ಮೇಲೆ ತನಗೆ ಹೆಮ್ಮೆ ಎನಿಸಿತು. ಅಲ್ಲಿಯವರೆಗೆ ಮನೆಯಲ್ಲಿ ತನ್ನ ಬಗ್ಗೆ ಯಾವತ್ತೂ ದೂರುಗಳನ್ನೇ ಕೇಳಿದ್ದ ಅವಳಿಗೆ ಯಾರೋ ದೂರದಿಂದ ತನ್ನ ಜಾಣತನವನ್ನು ಮೆಚ್ಚುತ್ತಿರುವುದು ತುಂಬಾ ಖುಷಿ ಆಯಿತು. ಅದೇ ಖುಷಿಯಲ್ಲಿ ಫೋನ್ ನೋಡುತ್ತಿದ್ದವಳಿಗೆ, ತಕ್ಷಣವೇ ಫೋನ್ ಕಟ್ ಆದದ್ದು ಅರಿವಿಗೆ ಬಂತು. ಅಯ್ಯೋ ಏನೋ ಎಡವಟ್ಟಾಯಿತು ಎಂದುಕೊಂಡು ತಕ್ಷಣ ಫೋನ್ ಪೆಯ ಹಿಸ್ಟರಿ ಓಪನ್ ಮಾಡಿದಳು. ಎದೆ ಝಲ್ ಎಂದಿತು. ಅಕೌಂಟ್ ಬ್ಯಾಲನ್ಸ ಜೀರೋ ಆಗಿತ್ತು.

**‘80,000 rps paid to KARTIK BAIRAGI’** ಎಂದು ಬರೆದಿತ್ತು. ಸೈಬರ್ ಅಪರಾಧದ ಬಗ್ಗೆ ಸಾಕಷ್ಟು ಕೇಳಿ, ಜಾಗೃತವಾಗಿದ್ದ ತಾನೇ, ಹೀಗೆ ಅಪರಾಧಿಗಳು ಬೀಸುವ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದು ತುಂಬಾ ಅಸಹ್ಯವೆನಿಸತೊಡಗಿತು. ತಕ್ಷಣ **1930** ನಂಬರ್‌ಗೆ ಕಾಲ್ ಮಾಡಿ ದೂರು ದಾಖಲಿಸಿದಳು. ಕಳೆದುಕೊಂಡ ಹಣದ ಬಗ್ಗೆ ಅವಳಿಗೆ ಚಿಂತೆ ಇರಲಿಲ್ಲ. ಮನೆಯಲ್ಲಿ ಗಂಡ ಅಥವಾ ಅತ್ತೆಯ ಬಗ್ಗೆ ಹೆದರಿಕೆ ಇರಲಿಲ್ಲ. ತಪ್ಪು ಮಾಡಿದಾಗ ದೊಡ್ಡವರು ಬಯ್ಯುವುದು ಸ್ವಾಭಾವಿಕ. ಆದರೆ ತಾನು ಮೋಸ ಹೋದ ಬಗ್ಗೆ ತನಗೆ ಬೇಸರವಿತ್ತು. ಗಂಡ ಯಾವುದೇ ಒತ್ತಡದಲ್ಲಿ ಇಲ್ಲದಿದ್ದಾಗ ವಿಷಯ ತಿಳಿಸಬೇಕು ಎಂದು ಕೊಳ್ಳುತ್ತಿದ್ದವಳಿಗೆ ‘ಮಧು, ಮಧು...’ ಎಂಬ ಗಂಡನ ಧ್ವನಿ ಕೇಳಿ, ‘ಹಾ! ಬಂದೆರಿ’ ಎಂದು ಓಡಿದಳು.

ಅವಳ ತಲೆಯಲ್ಲಿ ಬರೀ ಒಂದೇ ವಿಚಾರ ಮತ್ತು ಹೆಸರು, ‘ಕಾರ್ತಿಕ ಬೈರಾಗಿ’. ಬೈರಾಗಿ ಎಂತಹ ಹೆಸರು, ಸನ್ಯಾಸಿ, ವಿರಕ್ತ, ಕಾರ್ತಿಕ ಶಿವನ ಮಗ, ಅವನಿಗೇನು ಬಂತು ಹಣ ಕದಿಯುವ ಇಂಥಾ ಕರ್ಮ. ನನಗೆ ಹಣದ ಅವಶ್ಯಕತೆ ಸದ್ಯಕ್ಕೆ ಅಷ್ಟೇನು ಇಲ್ಲ ಸರಿ ಹೋಯ್ತು. ಆದರೆ ಯಾರಾದರೂ ಆಸ್ಪತ್ರೆಯಲ್ಲಿ ಎಡ್ಮಿಟ್ ಇದ್ದವರಿಗೆ, ಬ್ಯಾಂಕ್ ಲೋನ್ ಕಟ್ಟುವವರಿಗೆ, ಮಕ್ಕಳ ಫೀ ಕಟ್ಟುವವರಿಗೆ ಎಷ್ಟೊಂದು ಆಘಾತಕಾರಿ ಸಂದರ್ಭ ಇದು ಎಂದು ಯೋಚಿಸುತ್ತ ಫೇಸ್‌ಬುಕ್‌ನಲ್ಲಿ ‘ಕಾರ್ತಿಕ್ ಬೈರಾಗಿ’ಯನ್ನು ಹುಡುಕ ಹೊರಟಳು. ಎರಡು – ಮೂರು ಅಕೌಂಟ್‌ಗಳು ಆ ಹೆಸರಲ್ಲಿ ಓಪನ್ ಆದವು. ಅದರಲ್ಲಿ ಒಬ್ಬ ಮಾತ್ರ ಹರೆಯದ ಚಿಕ್ಕ ಹುಡುಗ. ತುಂಬಾ ಮಾಡರ್ನ. ಆತನ ಹೇರ್ ಸ್ಟೈಲ್, ಹರಿದ ಜೀನ್ಸ ಪ್ಯಾಂಟು, ಕೈಯಲ್ಲಿ ಕಡಗಗಳು, ತಲೆ ತುಂಬಾ ಹೋಳಿಯ ಬಣ್ಣಗಳು... ಮಧುಗೆ ತನ್ನ ಮಗನ ನೆನಪು ಬರತೊಡಗಿತು. ಈತನಿಗೆ ಯಾವುದೇ ಒಳ್ಳೆಯ ಕೆಲಸಕ್ಕೆ ಹಣದ ಅವಶ್ಯಕತೆ ಇದೆ ಎಂದೆನಿಸಲಿಲ್ಲ. ಉಳಿದ ಅಕೌಂಟ್‌ಗಳನ್ನು ನೋಡಿದರೆ ಈತನೇ ತುಂಬಾ ಮಾಡರ್ನ್. ಈತನೇ ಸೈಬರ್ ಕ್ರೈಮ್ ಮಾಡಿರಬಹುದು ಎಂಬುದರಲ್ಲಿ ಸಂಶಯವಿರಲಿಲ್ಲ. ಹಾಗಾದರೆ ನನ್ನ ಹಣ ಈ ಹುಡುಗನ ಭವಿಷ್ಯ ಹಾಳು ಮಾಡಲು ಉಪಯೋಗವಾಯಿತೇ? ಆ ಹಣವನ್ನು ಬಳಸಿ ಈ ಮಕ್ಕಳು ಏನೆಲ್ಲ ಮಾಡಬಹುದು? ಎಂದೆಲ್ಲ ಯೋಚಿಸುವಾಗ ತರುಣ ಹಾಗೇ ಕಣ್ಣ ಮುಂದೆ ಬಂದು ಹೋಗುತ್ತಿದ್ದ. ಹಣ ಕಳೆದುಕೊಂಡಿದ್ದಕ್ಕಲ್ಲ. ಅದರ ದುರುಪಯೋಗ, ಮಾಡಬಹುದಾದ ಅವಾಂತರಗಳನ್ನು ನೆನೆದು ಅವಳ ಕಣ್ಣುಗಳು ಒದ್ದೆಯಾದವು.

‘ಏ! ಬಿಂದು, ನಿಮ್ಮವ್ವಾ ಬರೇ ಫೋನ್ ಹಿಡಕೊಂಡು ಏನ ಮಾಡತಾಳ ನೋಡು! ಚಾದ ಹೊತ್ತಾತು. ಚಾ ಕಾಸಬೇಕು ಅನ್ನೋದು ಗೊತ್ತಾಗೋದಿಲ್ಲ, ಕರಿ ಅಕಿನ್ನ’ ಎಂದು ಅತ್ತೆ ಮಗಳಿಗೆ ಹೇಳುತ್ತಿರುವುದು ಕೇಳಿ ಮಧು ಓಡಿ ಅಡುಗೆ ಮನೆ ಸೇರಿದಳು.

ಪ್ರತಿಕ್ರಿಯಿಸಿ: **feedback@sudha.co.in**

